
ಭಗವಾನ್ ಚೈತನ್ಯರು ದಕ್ಷಿಣ ಭಾರತದಲ್ಲಿ ತೀರ್ಥಯಾತ್ರೆ ಮಾಡುತ್ತಿದ್ದರು. ಆಗ ಒಂದು ಕಡೆ ಒಬ್ಬ ಭಗವದ್ಗೀತೆ ಓದುತ್ತಿದ್ದ. ಮತ್ತೊಬ್ಬ ಹತ್ತಿರದಲ್ಲಿಯೆ ಕುಳಿತು ಕೇಳುತ್ತ ಕಣ್ಣೀರು ಸುರಿಸುತ್ತಿದ್ದ.
ಅಯ್ಯಾ, ನಿನಗೆ ಭಗವದ್ಗೀತೆ ಅರ್ಥ ವಾಗುತ್ತಿದೆಯೇ ?
ಸ್ವಾಮಿ, ನನಗೆ ಗೀತೆಯ ಒಂದು ಪದವೂ ಅರ್ಥ ವಾಗುತ್ತಿಲ್ಲ.
ಹಾಗಾದರೆ ಏಕೆ ತಾನೆ ಕಣ್ಣೀರು ಸುರಿಸುತ್ತಿರುವೆಯಪ್ಪ?
ಸ್ವಾಮಿ, ಹೇಗೆ ತಾನೇ ವರ್ಣಿಸಲಿ? ನನ್ನ ಎದುರಿಗೇ ಅರ್ಜುನನ ರಥ ನಿಂತಿರುವುದನ್ನು ಕಾಣುತ್ತಿದ್ದೇನೆ. ಅದರ ಮೇಲೆ ಕುಳಿತ ಅರ್ಜುನನ್ನೂ ಸಾರಥಿಯಾಗಿರುವ ಸ್ವಯಂ ಭಗವಾನ್ ಶ್ರೀಕೃಷ್ಣನನ್ನೂ ದರ್ಶಿಸುತ್ತಿದ್ದೇನೆ. ಅದಕ್ಕಾಗಿಯೇ ಆನಂದದಿಂದ ಕಣ್ಣೀರಿಡುತ್ತಿದ್ದೇನೆ.
ಚೈತನ್ಯ ಮಹಾಪ್ರಭುಗಳು ಆ ಭಕ್ತನನ್ನು ಅಪ್ಪಿಕೊಂಡು
ಅಯ್ಯಾ, ನಿನಗೆ ಮಾತ್ರ ಗೀತೆ ಸಂಪೂರ್ಣವಾಗಿ ಅರ್ಥವಾಗಿದೆ. ನೀನು ಧನ್ಯ!
ಚಿತ್ರ : ರಾಮಗೌತಮ
ಗೀತೆಯ ಅರ್ಥ
ಜ್ಞಾನವೆಂದರೆ ಪುಸ್ತಕ ಪಾಂಡಿತ್ಯವಲ್ಲ. ಭಗವಂತನ ದರ್ಶನವಾದಾಗ ಮಾತ್ರ ನಿಜವಾದ ಜ್ಞಾನ ಲಭಿಸುವುದು.